ಲವ್ವು ಮತ್ತು ನವ್ವು ಎರಡೂ ಒಂದೇ ನಾಣ್ಯದ ಎರಡು ಮುಖಗಳು ಅಂತಾರೆ ಅನುಭವಿಸಿದ ಅನುಭಾವಿಗಳು. ಪ್ರೇಮ ಹುಟ್ಟಿದ ಮೇಲೆ ನೋವು ಹುಟ್ಟಿತೋ, ನೋವು ಹೆಪ್ಪುಗಟ್ಟಿ ಪ್ರೇಮ ಪಲ್ಲವಿಸಿತೋ... ಇದೊಂತರಾ ಬೀಜವೃಕ್ಷ ನ್ಯಾಯದಂತೆ. ಕಿಶೋರನಂತೂ ನನ್ನನ್ನು ವಿಪರೀತ ಹಚ್ಚಿಕೊಂಡಿದ್ದಾನೆಂಬ ಗುಮಾನಿ ಇತ್ತೀಚೆಗೆ ಮನವನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಎಂತದೋ ಕಳವಳ, ಆತಂಕ, ಒಂತರಾ ಭಯ, ಒತ್ತಡ ಇವೆಲ್ಲಾ ದೇಹ ಮನಸ್ಸು ಹಾಗೂ ದಿನಚರಿಯ ಮೇಲೆರಗಿ ಕಂಗೆಡಿಸಿದರೂ ಅವನ ಒಡನಾಟವನ್ನು ದೂರತಳ್ಳಲಾಗದೆ ಮನಸ್ಸೇಕೋ ಜಿದ್ದಿಗೆ ಬಿದ್ದಿದೆ. ಅವನು ನನ್ನ ಮೇಲಿಟ್ಟಿರುವ ಪ್ರೀತಿ ಅಗಾಧವಾದದ್ದು ಅನ್ನಲು ಹಲವು ನಿದರ್ಶನಗಳನ್ನು ಕೊಡಬಲ್ಲೆ. ಇಬ್ಬರೂ ಒಂದೇ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ವಿಂಗ್‌ಗೆ ಅವನೇ ಬಾಸ್. ಅವನಿಗೆ ಪ್ರತ್ಯೇಕ ಚೇಂಬರ್ ವ್ಯವಸ್ಥೆ ಇದೆ. ಬಿಗ್‌ಬಾಸ್ ಸಹ ಅವನು ಹಾಕಿದ ಗೆರೆ ದಾಟುವುದಿಲ್ಲ ಎಂಬ ಗಾಸಿಪ್ಪೂ ಉಂಟು. ಅದೇನೋ ಅವನು ಬಾಸ್‌ನಂತೆ ವರ್ತಿಸಿದ್ದೇ ಕಡಿಮೆ. ಈತ ಹೈದರಾಬಾದ್‌ನಿಂದ ಪ್ರಮೋಶನ್ ಮೇಲೆ ಇಲ್ಲಿಗೆ ಬಂದಿಳಿದ ಕನ್ನಡಿಗ. ಮೊದಲಿದ್ದ ಮುದಿಯನೊಬ್ಬ ಮಹಾ ಕಿರಿಕ್ ಆಸಾಮಿ. ಇವನು ಹಾಗಲ್ಲ. ಬೇಕೆಂದಾಗ ತನ್ನ ಚೇಂಬರ್‌ಗೆ ನಮ್ಮನ್ನು ಕರೆಸಿಕೊಳ್ಳಬಹುದಾದರೂ ತುರ್ತು ಕೆಲಸಗಳಿದ್ದಾಗ ತಾನೇ ನಾವಿದ್ದಲ್ಲಿಗೆ ಬಂದು ಡಿಸ್ಕಶನ್ ಮಾಡುವಷ್ಟು, ತಪ್ಪನ್ನು ಸರಿಪಡಿಸುವಷ್ಟು ಉದಾರಿ. ಸಿಡುಕುವುದು, ದರ್ಪದಿಂದ ನಿಕೃಷ್ಟವಾಗಿ ಕಾಣುವಂತಹ ಮೇಲರಿಮೆಗಳು ಕಂಡಿಲ್ಲ. ಇವು ನನ್ನೊಬ್ಬಳ ಅಭಿಪ್ರಾಯಗಳಲ್ಲ. ನಮ್ಮ ವಿಂಗ್‌ನಲ್ಲಿ ದುಡಿಯುವ ಮೂವತ್ತು ಮಂದಿಯದ್ದೂ ಸಹ. ನಮ್ಮಲ್ಲಿ ಹುಡುಗಿಯರೇ ಹೆಚ್ಚು. ಹುಡುಗರು, ನಡುವಯಸ್ಕರೂ ಉಂಟು. ಎಲ್ಲರನ್ನೂ ಒಂದೇ ತರಹ ಟ್ರೀಟ್ ಮಾಡುವ ಚಾತುರ್ಯ ಗಾಡ್‌ಗಿಫ್ಟ್ ಇದ್ದಿರಬಹುದು. ಆದರೆ ಕೆಲಸದ ವಿಷಯದಲ್ಲಿ ಡೆವಿಲ್. ಕೆಲಸ ಮುಗಿಸದೆ ಎಂದೂ ಎದ್ದು ಹೋದವನಲ್ಲ; ನಮ್ಮನ್ನೂ ಬಿಡುವವನಲ್ಲ. ಕೆಲಸದ ವಿಷಯದಲ್ಲಿ ಯಾರ ದಾಕ್ಷಿಣ್ಯವೂ ಅವನಿಗಿಲ್ಲ.

ಕಂಪೆನಿಯವರು ಹೆಚ್ಚಿನ ತರಬೇತಿಗಾಗಿ ಅವನನ್ನು ನ್ಯೂಜಿಲೆಂಡ್‌ಗೆ ಕಳುಹಿಸುವ ಸುದ್ದಿ ಕೂಡ ಹಬ್ಬಿದೆ. ಮೇಲಾಗಿ ಒಳ್ಳೆಯ ಹೈಟು, ವೆಯ್ಟು, ಖದರು. ಕಲರು, ಕಲ್ಚರು ಇರುವ ಹುಡುಗ. ನನ್ನೊಂದಿಗೆ ಕೆಲಸಮಾಡುವ ಹುಡುಗಿಯರೆಲ್ಲಾ ಅವನಿಗಾಗಿ ಸಾಯುತ್ತಾರೆಂಬ ಅನುಮಾನ ನನ್ನಲ್ಲುಂಟು. ಅಷ್ಟೇ ಏಕೆ, ವಿವಾಹಿತೆ ಎರಡು ಮಕ್ಕಳ ತಾಯಿ ಶ್ರೀಲಕ್ಷ್ಮಿ ಅವನೊಡನೆ ಎಷ್ಟು ಬಿಡುಬೀಸಾಗಿ ವರ್ತಿಸುತ್ತಾಳೆಂದರೆ ಅವರಿಬ್ಬರ ನಡುವೆ ಅಫೇರ್ ಇದೆಯೆಂಬ ಗಾಸಿಪ್ ಕೂಡ ಹಬ್ಬಿದೆ. ನಾನದನ್ನು ನಂಬುವುದಿಲ್ಲ. ಏಕೆಂದರೆ ಅವನು ನನ್ನನ್ನು ಬರೀ ಪ್ರೀತಿಸುತ್ತಿಲ್ಲ, ಆರಾಧಿಸುತ್ತಿದ್ದಾನೆಂಬ ಗಾಢ ಸುವಾಸನೆ ದೇಹದ ತುಂಬಾ ವ್ಯಾಪಿಸಿದೆ. ದೇವರ ದಯೆ ನಮ್ಮ ಮೇಲೆ ಯಾರ ವಕ್ರದೃಷ್ಟಿಯೂ ಬಿದ್ದಿಲ್ಲಪ್ಪ. ಪೇಪರ್ಸ್ ಸಿಗ್ನೇಚರ್‌ಗೆಂದು ಅವನ ಚೇಂಬರ್‌ಗೆ ಹೋದಾಗ ನನ್ನ ಮುಖ ಒಂದಿಷ್ಟು ಬಾಡಿದ್ದರೂ ತಟ್ಟನೆ ಗುರುತಿಸುವಷ್ಟು ಸೆನ್ಸಿಟಿವ್. 'ಏಕೆ ರಂಜನಿ, ಹುಷಾರಿಲ್ವೆ?' ಅಂತ ನನ್ನ ಮೈಮುಖದ ತುಂಬಾ ಕಣ್ಣು ಹರಿಸಿಬಿಡುತ್ತಾನೆ. 'ಇಲ್ಲಪ್ಪ... ನನಗೇನಾಗಿದೆ. ಐ ಆಮ್ ಫೈನ್' ಎಂದರೆ ಅಷ್ಟಕ್ಕೇ ಬಿಡುವವನಲ್ಲ ಮಾರಾಯ. 'ಮನೆಯಲ್ಲಿ ಎಲ್ಲರೂ ಆರಾಮ್ ತಾನೆ' ಎಂಬ ಅವನ ಕಾಳಜಿ ನನ್ನಲ್ಲಿ ಅನೇಕ ಸಲ ಮುಜಗರವನ್ನುಂಟುಮಾಡಿದೆ. ಈ ಕಾರಣವಾಗಿ ಮನೆಯಲ್ಲಿ ಏನೇ ಮನಸ್ತಾಪಗಳು ಘಟಿಸಿದ್ದರೂ ಚೇಂಬರ್‌ಗೆ ಎಂಟ್ರಿಯಾದೊಡನೆ ದೇಹದಲ್ಲಿ ಲವಲವಿಕೆ, ತುಟಿಗಳ ಮೇಲೆ ನಗು ಬೆರಸಿಕೊಳ್ಳುತ್ತೇನೆ. ಅನೇಕಾನೇಕ ಸಲ ಅವನು 'ಯು ಆರ್ ಗುಡ್ ಲುಕಿಂಗ್ ಟುಡೇ' ಅಂದಾಗ